ಸೆಲೆಬ್ರಿಟಿ

ಹನಿ

# ಬಂದ್ರು ಸಾರ್..!

ರವಿಚಂದ್ರನ್ ಸಿನಿಮಾ 'ಪ್ರೇಮಲೋಕ'ದಲ್ಲಿ ಹಂಸಲೇಖ ಬರೆದ ಹಾಡೊಂದಿದೆ. ಕಾಲೇಜಿಗೆ ಹೊಸತಾಗಿ ಸೇರಿದ ಸುಂದರ ತರುಣಿ (ಜೂಹಿ ಚಾವ್ಲಾ) ಮೊದಲ ಬಾರಿ ಕ್ಲಾಸಿನೊಳಕ್ಕೆ ಬರುವ ದೃಶ್ಯವದು. ಮೇಷ್ಟ್ರು (ವಿಷ್ಣುವರ್ಧನ್) ದುಶ್ಯಂತ– ಶಕುಂತಲೆಯರ ಪ್ರೇಮ ಸನ್ನಿವೇಶವನ್ನು ಹಾಡಿನ ಮೂಲಕ ವರ್ಣಿಸುತ್ತಿದ್ದಾರೆ. ಆಗ ಸುಂದರಿ ಜೂಹಿ ಬಾಗಿಲ ಬಳಿ ಬರುತ್ತಾಳೆ. ಹುಡುಗ್ರೆಲ್ಲ ಒಟ್ಟಾಗಿ 'ಬಂದ್ಳು ಸಾರ್.. ಬಂದ್ಳು ಸಾರ್..' ಎಂದು ಹಾಡುತ್ತಾರೆ. ಮೇಷ್ಟ್ರು 'ನೀನೇನಾ ಶಕುಂತಳಾ?' ಎಂದು ಕೇಳಿದರೆ. ಆಕೆ 'ಅಲ್ಲಾ ನಾನ್ ಶಶಿಕಲಾ' ಅಂತಾಳೆ.




ಕರ್ನಾಟಕದ ಬಿಜೆಪಿ ಶಾಸಕರ ಸ್ಥಿತಿಯೂ ಇವತ್ತು ಹಾಗೆಯೇ ಇದೆ. ರಾಜ್ಯಸಭೆಗೆ ಸ್ಪರ್ಧಿಸಲು ಧನಂಜಯ ಕುಮಾರ್ ಸಹಿತ ರಾಜ್ಯದ ಹಿರಿಯ ನಾಯಕರೆಲ್ಲ ಕ್ಯೂನಲ್ಲಿ ನಿಂತಿದ್ದರೆ, ಹಠಾತ್ತಾಗಿ ಚಿತ್ರನಟಿ ಹೇಮಮಾಲಿನಿ ದೆಹಲಿಯಿಂದಲೇ ಕಣಕ್ಕೆ ಧುಮುಕಿದ್ದಾರೆ. ಹೇಮಾರನ್ನು ನೋಡಿ ಬೆರಗುಗೊಂಡಿರುವ ಬಿಜೆಪಿ ಶಾಸಕರೆಲ್ಲ 'ಬಂದ್ರು ಸಾರ್.. ಬಂದ್ರು ಸಾರ್..' ಎಂದು ಕೂಗುತ್ತಿದ್ದಾರೆ!

ಈ ಮಧ್ಯೆ ಹೇಮಮಾಲಿನಿ 'ಕರ್ನಾಟಕದ ಹೊರಗಿನವರು' ಎಂಬ ಕೂಗೆದ್ದಿದೆ. 'ಬಾಲಿವುಡ್ ತಾರೆಯರು ಭಾರತದ ಯಾವ ರಾಜ್ಯಕ್ಕೂ ಹೊರಗಿನವರಲ್ಲ' ಎನ್ನುವುದು ಇವತ್ತಿನ ವಾಸ್ತವ. 2003ರಿಂದ ರಾಜ್ಯಸಭೆ ಸದಸ್ಯೆ ಆಗಿರುವ ಹೇಮಕ್ಕ ಮತ್ತೆ ಎರಡನೆ ಬಾರಿಗೆ ರಾಜ್ಯಸಭೆಗೆ ಲಗ್ಗೆ ಇಡಲಿದ್ದಾರೆ. ಗೆದ್ದರೆ ಕರ್ನಾಟಕದ 'ಪ್ರಭಾವಶಾಲಿ ಮಹಿಳೆಯರ ಪಟ್ಟಿ'ಯಲ್ಲಿ ಶೋಭಕ್ಕ ಮತ್ತು ಸುಶ್ಮಕ್ಕನ ಜತೆಗೆ ಹೇಮಕ್ಕ ಕೂಡಾ ಸೇರಿಕೊಳ್ಳುತ್ತಾರೆ.

ತಮಿಳುನಾಡಿನ ಅಮ್ಮಂಗುಡಿಯ ಹೇಮಮಾಲಿನಿ ಚಕ್ರವರ್ತಿ (ಬರ್ತ್‌ಡೇ 16–10–1948) ಸುಲಭವಾಗಿ ಚಿತ್ರನಟಿಯಾಗಲಿಲ್ಲ. 1961ರಲ್ಲಿ ಮೊದಲ ಬಾರಿಗೆ 'ಪಾಂಡವ ವನವಾಸಂ' ಎಂಬ ತೆಲುಗು ಚಿತ್ರದಲ್ಲಿ ಒಂದು ಡ್ಯಾನ್ಸ್ ಮಾಡಿದ್ದ ಹೇಮಾ, 1964ರಲ್ಲಿ ತಮಿಳು ಸಿನಿಮಾದಲ್ಲಿ ಅವಕಾಶಕ್ಕೆ ಯತ್ನಿಸಿದಾಗ, ನಿರ್ದೇಶಕ ಶ್ರೀಧರ್ 'ಈಕೆಗೆ ಗ್ಲಾಮರ್ ಇಲ್ಲ' ಎಂದು ರಿಜೆಕ್ಟ್ ಮಾಡಿದ್ದರು! 4 ವರ್ಷಗಳ ಬಳಿಕ ಹಿಂದಿಯಲ್ಲಿ ರಾಜ್‌ಕಪೂರ್ ಜತೆಗೆ ಮೊದಲ ಅವಕಾಶ ಸಿಕ್ಕಿದ್ದು 'ಸಪ್ನೋಂ ಕ ಸೌದಾಗರ್'ನಲ್ಲಿ. ಬಳಿಕ ಒಂದೊಂದಾಗಿ ಸಿನಿಮಾಗಳು ಬಂದವು. 77ರಲ್ಲಿ ಬಂದ 'ಡ್ರೀಮ್‌ಗರ್ಲ್' ಸ್ಟಾರ್‌ಗಿರಿ ಕೊಟ್ಟಿತು. ಟೂ ಪೀಸ್‌ನಲ್ಲಿ ಈಜುಕೊಳಕ್ಕೂ ಇಳಿದ ಹೇಮಾ ನಿಧಾನಕ್ಕೆ ಮೇಲೇರಿದವರು. 'ಶೋಲೆ' ಬಳಿಕ ಮನೆಮಾತಾದರು. ನಿರ್ದೇಶಕಿ, ನಿರ್ಮಾಪಕಿಯೂ ಆದರು. ಇವತ್ತಿಗೂ ಭರತನಾಟ್ಯ ಪ್ರದರ್ಶನ ನೀಡುವ ಹೇಮಾ, ಕೊರಿಯೋಗ್ರಾಫರ್ ಕೂಡಾ ಹೌದು.

ಹೇಮಾರನ್ನು ಮದುವೆಯಾಗಲು ಸಂಜೀವ್ ಕುಮಾರ್, ಜಿತೇಂದ್ರ ಕೂಡಾ ಮುಂದೆ ಬಂದಿದ್ದರು. ಆದರೆ ಡ್ರೀಂಗರ್ಲ್ ಒಪ್ಪಿ ಕೈ ಹಿಡಿದದ್ದು ಅದಾಗಲೇ ಒಂದು ಮದುವೆಯಾಗಿದ್ದ ಧರ್ಮೇಂದ್ರನನ್ನು. ಅದಕ್ಕಾಗಿ ಇಬ್ಬರೂ ಇಸ್ಲಾಂ ಧರ್ಮಕ್ಕೆ ಮತಾಂತರವೂ ಆದರು! ಈಗ ಮತಾಂತರವನ್ನು ವಿರೋಧಿಸುವ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಹೇಮಾ! 40 ವರ್ಷಗಳಲ್ಲಿ 150 ಸಿನಿಮಾಗಳಲ್ಲಿ ನಟಿಸಿರುವ ಹೇಮಾ ಬಳಿ 111 ಕೋಟಿ ರೂಪಾಯಿ ಆಸ್ತಿ ಇದೆಯಂತೆ. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆ ಆದ ಬಳಿಕ ಕನ್ನಡಿಗರಿಗೆ ಏನಾದರೂ ಉಪಯೋಗ ಆದೀತೆ..? 'ಡ್ರೀಮ್‌ಗರ್ಲ್' ಆಗಿರೋದರಿಂದ ನಾವು ಕನಸು ಕಾಣಲಡ್ಡಿಯಿಲ್ಲ!



# ಗಡ್ಡಕ್ಕೆ ಬಿತ್ತು ಬೆಂಕಿ!

ಮುಅಮ್ಮರ್ ಗಡ್ಡಾಫಿಯ ಸಾಮ್ರಾಜ್ಯಕ್ಕೆ ಬೆಂಕಿ ಬಿದ್ದಿದೆ. ಲಿಬಿಯಾದ ಈ ಕಪಿಮುಷ್ಟಿಯ ಆಡಳಿತಗಾರನ ಕೊನೆಯ ದಿನಗಳು ಸಮೀಪಿಸಿವೆ. ಲಿಬಿಯಾದಲ್ಲಿ ಪ್ರಜಾಪ್ರಭುತ್ವವಾದಿ ಜನ ಬೀದಿಗಿಳಿದಿದ್ದಾರೆ. ಅಮೆರಿಕ ಸಹಿತ ಪಶ್ಚಿಮದ ದೇಶಗಳೆಲ್ಲ ಖುಷಿಯಿಂದ ಜನರ ಬೆಂಬಲಕ್ಕೆ ನಿಂತಿವೆ. ಸೇನೆಯ ಮೂಲಕ ಜನರ ದಮನಕ್ಕೆ ಗಡ್ಡಾಫಿ ಇನ್ನಿಲ್ಲದ ಯತ್ನ ನಡೆಸಿದ್ದಾರೆ.

ಗಡ್ಡಾಫಿ (ಬರ್ತ್‌ಡೇ 7–6–1942) ಲಿಬಿಯಾದ 'ಕರ್ನಲ್ ಆಡಳಿತಗಾರ'ರಾಗಿ ಬಂದದ್ದು 1969ರಲ್ಲಿ. ಆಗಿನ ದೊರೆ ಇದ್ರಿಸ್ ಚಿಕಿತ್ಸೆಗಾಗಿ ಟರ್ಕಿಗೆ ಹೋಗಿದ್ದಾಗ, ಮಿಲಿಟರಿಯಲ್ಲಿದ್ದ ಗಡ್ಡಾಫಿ ಜೂನಿಯರ್ ಸೇನಾಧಿಕಾರಿಗಳ ಪುಟ್ಟ ತಂಡದೊಂದಿಗೆ ಕ್ಷಿಪ್ರಕ್ರಾಂತಿ ನಡೆಸಿದರು. ದೊರೆಯ ಮಗನನ್ನು ಗೃಹಬಂಧನಕ್ಕೆ ತಳ್ಳಿದರು. 'ನಮ್ಮದು ಇಸ್ಲಾಮಿಕ್ ಸೋಶ್ಯಲಿಸಂ' ಎಂದು ಘೋಷಿಸಿದ ಗಡ್ಡಾಫಿ ಆಡಳಿತ ವ್ಯವಸ್ಥೆಯನ್ನು ಬದಲಾಯಿಸುತ್ತಾ ಸರ್ವಾಧಿಕಾರಿಯೇ ಆದರು. 'ಲಿಬಿಯನ್ ಅರಬ್ ರಿಪಬ್ಲಿಕ್' ದೇಶವನ್ನು ಅರಬ್‌ಲೋಕದ ಮುಖಂಡನಾಗಿಸಲು ಹೆಣಗಾಡಿದರು. ಶರಾಬು ಮತ್ತು ಜೂಜು ನಿಷೇಧಿಸಿ, ಎಲ್ಲರಿಗೂ ಮನೆ, ಕಾರು ಕೊಟ್ಟು ಹೊಸ ಸಮಾಜವಾದದ ಕನಸು ಕಂಡರು.

ಗಡ್ಡಾಫಿ ಪಶ್ಚಿಮದ ದೇಶಗಳ ದೊಡ್ಡ ವೈರಿ. ಅದಕ್ಕೆ ಮುಖ್ಯ ಕಾರಣ ಇಸ್ರೇಲ್. ಅಮೆರಿಕದ ಅಧ್ಯಕ್ಷ ರೊನಾಲ್ಡ್ ರೇಗನ್ 'ಮಧ್ಯಪೂರ್ವದ ಹುಚ್ಚು ನಾಯಿ' ಎಂದು ಗಡ್ಡಾಫಿಯನ್ನು ಕರೆದಿದ್ದರು. ಆದರೆ ಅಮೆರಿಕದ ದಾಳಿಯ ಮಧ್ಯೆಯೂ ಗಡ್ಡಾಫಿ ಅಧಿಕಾರವನ್ನು ಉಳಿಸಿಕೊಂಡದ್ದು ದೊಡ್ಡ ಸಾಧನೆಯೇ. 27ರ ಹರೆಯದಿಂದಲೂ ಸನ್‌ಗ್ಲಾಸ್, ಸಫಾರಿ ಸೂಟ್‌ನಲ್ಲಿ ಓಡಾಡುತ್ತಿರುವ ಗಡ್ಡಾಫಿ ಇನ್ನೊಬ್ಬ ಚೆ ಗೆವಾರೆ ಆಗುವ ಬಯಕೆ ಇದ್ದವರು. ತನ್ನ ಸುತ್ತ ಸದಾ 40 ಹೆಣ್ಣುಮಕ್ಕಳ ಅಂಗರಕ್ಷಕ ಪಡೆ 'ಅಮೆಜಾನಿಯನ್ ಗಾರ್ಡ್' ಹೊಂದಿರುವ ಗಡ್ಡಾಫಿ ಮಾವೋನ 'ರೆಡ್ ಬುಕ್'ನಂತೆಯೇ 'ಗ್ರೀನ್ ಬುಕ್' ಬರೆದಾತ. 'ಎಸ್ಕೇಪ್ ಟು ಹೆಲ್ ಆ್ಯಂಡ್ ಅದರ್ ಸ್ಟೋರೀಸ್' ಎಂಬ ಇವರ ಪುಸ್ತಕವೂ ಜನಪ್ರಿಯ.

69 ವರ್ಷಗಳಿಂದ ಅಧಿಕಾರದಲ್ಲಿದ್ದು ದಾಖಲೆ ನಿರ್ಮಿಸಿರುವ ಗಡ್ಡಾಫಿ ಸುಲಭದಲ್ಲಿ ಸೋಲುವಂತೆ ಕಾಣುತ್ತಿಲ್ಲ. ಇಬ್ಬರು ಹೆಂಡತಿಯರು, ಎಂಟು ಮಕ್ಕಳು (ಅದರಲ್ಲಿ 7 ಗಂಡು), ಇಬ್ಬರು ದತ್ತು ಪುತ್ರರು, 60 ಶತಕೋಟಿ ಡಾಲರ್‌ನ ಆಸ್ತಿಯಷ್ಟೇ ಅವರ ಸದ್ಯದ ಬಲ ಎಂಬಂತೆ ಕಾಣುತ್ತಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65